e-mail: info@veerashaivamahasabha.com ದೂ: 080-23618400, 23602177/78

# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ.17/4, 'ವೀರಶೈವ-ಲಿಂಗಾಯತ ಭವನ', ರಮಣಮಹರ್ಷಿರಸ್ತೆ, ಸದಾಶಿವನಗರ, ಬೆಂಗಳೂರು-560 080

ಸಂಖ್ಯೆ: ಆರ್‌ಜಿಎಂ/2022-23 ದಿನಾಂಕ: 11-04-2022

## 45, 46 ಮತ್ತು 47 ನೇ ವಾರ್ಷಿಕ ಪ್ರಾತಿನಿಧಿಕ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರ

ಅಖಿಲ ಭಾರತ ವೀರಶೈವ ಮಹಾಸಭೆಯ **2018-19, 2019-20** ಮತ್ತು **2020-21**ನೇ ವರ್ಷಗಳ **45, 46** ಮತ್ತು **47**ನೇ **ವಾರ್ಷಿಕ ಪ್ರಾತಿನಿಧಿಕ ಸಾಮಾನ್ಯ ಸಭೆ**ಯನ್ನು ಮಹಾಸಭೆಯ ಅಧ್ಯಕ್ಷರಾದ **ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು ಇವರ ಅಧ್ಯಕ್ಷತೆಯಲ್ಲಿ "ತರಳಬಾಳು ಕೇಂದ್ರ ಸಭಾಂಗಣ", 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ.ನಗರ (ಪ್ರಧಾನ ಅಂಚೆ ಕಛೇರಿ ಹತ್ತಿರ), ಬೆಂಗಳೂರು-560032** ಇಲ್ಲಿ **ದಿನಾಂಕ: 15-05-2022ನೇ ರವಿವಾರ ಬೆಳಿಗ್ಗೆ 11.30 ಗಂಟೆಗೆ ಈ ಕೆಳಗಿನ ಕಾರ್ಯಸೂಚಿಯಲ್ಲಿ ತಿಳಿಸಿರುವ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲು ಕರೆಯಲಾಗಿದೆ.** ಆದ್ದರಿಂದ ಪ್ರಾತಿನಿಧಿಕ ಸಾಮಾನ್ಯ ಸಭೆಯ ಮಾನ್ಯ ಸದಸ್ಯರೆಲ್ಲರೂ ಸಭೆಗೆ ಆಗಮಿಸಬೇಕಾಗಿ ವಿನಂತಿ.

### ಕಾರ್ಯಸೂಚಿ

1. ಪ್ರಾರ್ಥನೆ
2. ಸ್ವಾಗತ
3. ಶ್ರದ್ಧಾಂಜಲಿ
4. ಸಭೆಯ ತಿಳುವಳಿಕೆ ಪತ್ರ ಓದಿ ದೃಢೀಕರಿಸುವುದು.
5. ದಿನಾಂಕ 19-01-2019ರಂದು ನಡೆದ ಹಿಂದಿನ ವಾರ್ಷಿಕ ಪ್ರಾತಿನಿಧಿಕ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.
6. 2018-19, 2019-20 ಮತ್ತು 2020-21ನೇ ವರ್ಷಗಳ **"ವಾರ್ಷಿಕ ವರದಿ"** ಮಂಡನೆ-ಅಂಗೀಕಾರ.
7. 2018-19, 2019-20 ಮತ್ತು 2020-21ನೇ ವರ್ಷಗಳಲ್ಲಿ ಕಾರ್ಯಕಾರಿ ಸಮಿತಿ ಸಭೆಯು ತೆಗೆದುಕೊಂಡ **ನಿರ್ಣಯಗಳ** ಮಂಡನೆ ಮತ್ತು ಅಂಗೀಕಾರ.
8. 2018-19, 2019-20 ಮತ್ತು 2020-21ನೇ ವರ್ಷಗಳ **ಲೆಕ್ಕಪರಿಶೋಧಕರ ವರದಿ** ಮಂಡನೆ ಮತ್ತು ಅಂಗೀಕಾರ.
9. 2022-23ನೇ ಸಾಲಿನ ವಾರ್ಷಿಕ ಆದಾಯ-ವೆಚ್ಚಗಳ ಅಂದಾಜು ಪಟ್ಟಿಯ ಮಂಡನೆ ಹಾಗೂ ಅಂಗೀಕಾರ.
10. 2019-20 ಮತ್ತು 2020-21ನೇ ವರ್ಷಗಳಿಗೆ **ಲೆಕ್ಕಪರಿಶೋಧಕರ ನೇಮಕ** ಮತ್ತು ಅವರಿಗೆ ನೀಡಿದ **ಸಂಭಾವನೆಗೆ** ಅನುಮೋದನೆ.
11. 2021-22 ಮತ್ತು 2022-23ನೇ ವರ್ಷಗಳಿಗೆ **ಲೆಕ್ಕಪರಿಶೋಧಕರ**ನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ಗೊತ್ತುಪಡಿಸುವುದು.
12. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.
13. ಅಧ್ಯಕ್ಷರ ಭಾಷಣ.
14. ವಂದನಾರ್ಪಣೆ.

**(ಈಶ್ವರ ಖಂಡ್ರೆ, ಶಾಸಕರು)**
ಮಹಾಪ್ರಧಾನ ಕಾರ್ಯದರ್ಶಿ

**ವಿಶೇಷ ಸೂಚನೆ:**

1. ಸಭೆಯಲ್ಲಿ ಚರ್ಚಿಸಲಿಚ್ಛಿಸುವ ವಿಷಯಗಳನ್ನು ಟಿಪ್ಪಣಿಯೊಂದಿಗೆ ಮಾನ್ಯ ಸದಸ್ಯರು **ದಿನಾಂಕ: 05-05-2022** ರೊಳಗಾಗಿ ಕೇಂದ್ರ ಕಛೇರಿಗೆ ಕಳುಹಿಸಿಕೊಡಲು ಕೋರಿದೆ.
2. 2018-19, 2019-20 ಮತ್ತು 2020-21ನೇ ವರ್ಷಗಳ **"ವಾರ್ಷಿಕ ವರದಿ"**ಯನ್ನು ಮಹಾಸಭೆಯ ಜಾಲತಾಣದಲ್ಲಿ (website) www.veerashaivamahasabha.org ವೀಕ್ಷಿಸಬಹುದಾಗಿದೆ ಹಾಗೂ ಪ್ರತಿಗಳನ್ನು ಮಾನ್ಯ ಸದಸ್ಯರುಗಳಿಗೆ ಸಭೆಯ ಮುಂಚಿತವಾಗಿ ವಿತರಿಸಲಾಗುವುದು.
3. ಈ ಸಭೆಗೆ ಆಗಮಿಸುವ ಸದಸ್ಯರು ಮಹಾಸಭೆಯ ಅಥವಾ ಯಾವುದಾದರು **"ಗುರುತಿನ ಚೀಟಿ"** ಹಾಗೂ ಈ ತಿಳುವಳಿಕೆ ಪತ್ರವನ್ನು ತಮ್ಮೊಡನೆ ತರಬೇಕೆಂದು ವಿನಂತಿಸಲಾಗಿದೆ.

ಗೆ,
ಮಹಾಸಭೆಯ ಪ್ರಾತಿನಿಧಿಕ ಸಾಮಾನ್ಯ ಸಭೆಯ ಸದಸ್ಯರುಗಳಿಗೆ.